## 3ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು.

## Spl. C. No. 23/2014

| | | |
|---|---|---|
| ಹೆಸರು | ದಾಸಪ್ಪ | ಪ್ರಾಸಾ.7 |
| ತಂದೆಯ ಹೆಸರು | ರಂಗಯ್ಯ | ಚಾಸಾ.5 |
| ವಯಸ್ಸು | 55 ವರ್ಷ | |
| ಉದ್ಯೋಗ | ವ್ಯವಸಾಯ | |
| ವಾಸ | ಕುಣಿಕೇನ ಹಳ್ಳಿ | |

**ದಿನಾಂಕಃ 03.02.2020 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಮಾನ್ಯ ಎಸ್.ಪಿ.ಪಿ ರವರಿಂದಃ**

ಚಾಸಾ.1 ಮತ್ತು ಆರೋಪಿಗಳು ಗೊತ್ತಿಲ್ಲ. ನಮ್ಮ ಊರಿನಿಂದ ಬಿಸಿ ಕಾವಲಿಗೆ 6-7 ಕಿಮಿ ದೂರವಾಗುತ್ತದೆ. ಗಲಾಟೆ ವಿಚಾರ ನನಗೆ ಗೊತ್ತಿಲ್ಲ. 4 ವರ್ಷಗಳ ಹಿಂದೆ ಪೊಲೀಸರು ಬಂದು ಮಹಜರಿಗೆ ಸಹಿ ಹಾಕು ಎಂದು ಹೇಳಿದ ಕಾರಣ ನಾನು ಸಹಿ ಮಾಡಿದ್ದೇನೆ. ನಾನು ಗಲಾಟೆ ನೋಡಿಲ್ಲ ಮತ್ತು ಬಿಡಿಸಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟಿಸವಾಲು ಮಾಡಲು ಎಸ್‌ಪಿಪಿರವರು ಅನುಮತಿ ಕೋರಿದ್ದು , ಸಾಕ್ಷಿಯ ಕಲಂ 161 ರ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಎಸ್.ಪಿ.ಪಿ ರವರಿಂದ.**

ಚಾಸಾ.4 ರವರು ನನಗೆ ಗೊತ್ತು. ಚಾಸಾ.4 ರವರ ಜಮೀನಿಗೆ ನಾನು ಕೆಲಸಕ್ಕೆ ಹೋಗುತ್ತಿದ್ದೆ ಎಂದರೆ ಸರಿಯಲ್ಲ.

ದಿಃ 04.08.13 ರಂದು ನಾನು ಚಾಸಾ.4 ರವರ ತೋಟದಲ್ಲಿ ಕೆಲಸ ಮಾಡುತ್ತಿದ್ದೆ ಎಂದರೆ ಸರಿಯಲ್ಲ. 1 ರಿಂದ 4 ನೇ ಆರೋಪಿಗಳು ಚಾಸಾ.6 ರವರ ಜಮೀನಿಗೆ ಹೋಗಿ ಅಕ್ರಮವಾಗಿ ರೋಟಿಯಿಂದ ತೆಂಗಿನ ಕಾಯಿ ಕೀಳುತ್ತಿದ್ದರು ಎಂದರೆ ಸರಿಯಲ್ಲ. ಆಗ ಚಾಸಾ.1 ರವರು ಚಾಸಾ.6 ರವರ ತೋಟವನ್ನು ನೋಡಿಕೊಳ್ಳುತ್ತಿದ್ದು, ಈ ಬಗ್ಗೆ ಪ್ರಶ್ನಿಸಿದ್ದಾರೆ ಎಂದರೆ ಸರಿಯಲ್ಲ. ಆಗ ಆರೋಪಿಗಳು ಚಾಸಾ.1 ರವರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ ಮಾದಿಗ ನನ್ನ ಮಗನೇ ಎಂದು ಜಾತಿ ನಿಂದನೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಆಗ 1 ನೇ ಆರೋಪಿ ತನ್ನ ಕೈ ಯಿಂದ ಚಾಸಾ.1 ರವರ ಎದೆಯ ಬಲಭಾಗ ಮತ್ತು ಎಡಭಾಗಕ್ಕೆ ಗುದ್ದಿದಾಗ ಚಾಸಾ.1 ರವರು ಕೆಳಕ್ಕೆ ಬಿದ್ದರು ಎಂದರೆ ಸರಿಯಲ್ಲ. 2 ರಿಂದ 4 ನೇ ಆರೋಪಿಗಳು ಚಾಸಾ.1 ರವರ ಹೊಟ್ಟೆ ಮತ್ತು ಎರಡು ಕಾಲಿನ ಮಂಡಿಗಳಿಗೆ ಒದ್ದು, ನೋವು ಉಂಟುಮಾಡಿದ್ದಾರೆ ಎಂದರೆ ಸರಿಯಲ್ಲ. ಚಾಸಾ.4 ರವರ ತೋಟ ಪಕ್ಕದಲ್ಲಿ ಇದೆ ಎಂದರೆ ಸರಿ. ಆಗ ನಾನು , ಚಾಸಾ.2 ರಿಂದ 4 ವರುಗಳು ಜಗಳಬಿಡಿಸಿದೆವು ಎಂದರೆ ಸರಿಯಲ್ಲ. 8 ನೇ ತಿಂಗಳು ಮಳೆಗಾಲ ಎಂದರೆ ನನಗೆ ಗೊತ್ತಿಲ್ಲ. ನಾನು ದಿನಾ ತೋಟದ ಬಳಿಗೆ ಕಾಯಿ ಬಿದ್ದಿರುವುದನ್ನು ನೋಡಲು ಹೋಗುತ್ತೇನೆ ಎಂದರೆ ಸರಿಯಲ್ಲ. ಚಾಸಾ.1 ರವರನ್ನು ಚಾಸಾ.2 ರವರು ನಂತರ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ ಎಂದರೆ ಸರಿಯಲ್ಲ. ದಿಃ 08.08.13 ರಂದು ಚಾಸಾ.17 ರವರು ನಿಪಿ.4 ರಂತೆ ನನ್ನ ಹೇಳಿಕೆ ದಾಖಲಿಸಿಕೊಂಡಿದ್ದರೂ, ನನ್ನ ಹೇಳಿಕೆಗೆ ವ್ಯತಿರಿಕ್ತವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರಕರಣದ ಪ್ರತ್ಯಕ್ಷದರ್ಶಿ ಆಗಿದ್ದರೂ ಆರೋಪಿತರಿಗೆ ಶಿಕ್ಷೆ ತಪ್ಪಿಸಲು ಸುಳ್ಳು ಸಾಕ್ಷಿನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿ ಸವಾಲುಃ ಆರೋಪಿ ಪರ ಶ್ರೀ ವಕೀಲರಿಂದ.**

**ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ

3ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು.